# QCA : 29

# ಪ್ರಬಂಧ

# ESSAY

# 2014

ಸಮಯ : 3 ಗಂಟೆಗಳು
Time : 3 hours

ಗರಿಷ್ಠ ಅಂಕಗಳು : 250
Maximum marks : 250

## ಸೂಚನೆಗಳು

## INSTRUCTIONS

1. ಉತ್ತರಿಸುವುದಕ್ಕೆ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಯನ್ನು ಗಮನವಿಟ್ಟು ಓದಿಕೊಳ್ಳಿ.

2. ಪ್ರವೇಶ ಪ್ರಮಾಣ ಪತ್ರದಲ್ಲಿ ಅಧಿಕೃತವಾಗಿ ತಿಳಿಸಿದ ಭಾಷಾ ಮಾಧ್ಯಮದಲ್ಲಿಯೇ ಪ್ರಬಂಧವನ್ನು ಬರೆಯಬೇಕು. ಈ ಪ್ರಶ್ನೆ ಹಾಗೂ ಉತ್ತರ ಪುಸ್ತಿಕೆಯ ರಕ್ಷಾಪುಟದಲ್ಲಿ ಒದಗಿಸಿರುವ ಸ್ಥಳದಲ್ಲಿ ನೀವು ಯಾವ ಭಾಷೆಯಲ್ಲಿ ಉತ್ತರಿಸುತ್ತಿದ್ದೀರಿ ಎಂಬುದನ್ನು ನಮೂದಿಸಬೇಕು. ಅಧಿಕೃತವಾಗಿ ತಿಳಿಸಿದ ಭಾಷೆಯನ್ನು ಬಿಟ್ಟು ಬೇರೆ ಮಾಧ್ಯಮದಲ್ಲಿ ಬರೆದ ಉತ್ತರಗಳಿಗೆ ಅಂಕಗಳನ್ನು ನೀಡಲಾಗುವುದಿಲ್ಲ.

3. ನಿಗದಿಪಡಿಸಿದ ಪದಗಳ ಮಿತಿಯನ್ನು ಪಾಲಿಸತಕ್ಕದ್ದು.

4. ಉತ್ತರ ಪ್ರಸ್ತಿಕೆಯಲ್ಲಿ ಯಾವುದಾದರೂ ಪುಟವನ್ನು ಅಥವಾ ಪುಟದ ಭಾಗವನ್ನು ಖಾಲಿಬಿಟ್ಟಿದ್ದರೆ ಅದನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

**(Please read each of the following instructions carefully before attempting questions)**

The **ESSAY** must be written in the medium authorized in the Admission Certificate which must be stated clearly on the cover of this Question-cum-Answer (QCA) Booklet in the space provided. No marks will be given for answers written in a medium other than the authorized one.

Word limit, as specified, should be adhered to.

Any page or portion of the page left blank in the Question-cum-Answer Booklet must be clearly struck off.

**A ಮತ್ತು B ಈ ಎರಡು ಭಾಗಗಳಿಂದ ಒಂದೊಂದರಂತೆ ಆಯ್ದುಕೊಂಡು ಎರಡು ಪ್ರಬಂಧಗಳನ್ನು ಬರೆಯಿರಿ. ಪ್ರತಿಯೊಂದು ಪ್ರಬಂಧವೂ ಸುಮಾರು 1000–1200 ಪದಗಳಲ್ಲಿರಬೇಕು.** **125 × 2 = 250**

**Write two essays, choosing one from each of the Section-A and Section-B in about 1000-1200 words each.**

## ಭಾಗ–ಅ

## Section-A

1. ಜನಸಂಖ್ಯಾ ಲಾಭಾಂಶ ಎಂಬ ಪರಿಕಲ್ಪನೆಯನ್ನು ವಿವರಿಸಿ. ಇದರ ಅನುಕೂಲಗಳೇನು? ಜನಸಂಖ್ಯಾ ಲಾಭಾಂಶದ ಅನುಕೂಲಗಳನ್ನು ಪಡೆಯುವ ವಿವಿಧ ವಿಧಾನಗಳನ್ನು ಕುರಿತು ಚರ್ಚಿಸಿ.

   Explain the concept 'Demographic Dividend' what are its advantages? Discuss the different methods of reaping the benefits of Demographic Dividend.

2. "ಭಾರತದ ಪ್ರಜಾಪ್ರಭುತ್ವವು ತನ್ನ ಆಂತರಿಕ ವೈರುಧ್ಯಗಳ ನಡುವೆಯೂ ಪ್ರತೀ ಚುನಾವಣೆಯೊಂದಿಗೆ ಗಟ್ಟಿಯಾಗುತ್ತಾ ಹೋಗಿದೆ". ವಿವರಿಸಿ.

   "Indian democracy despite internal contradictions has emerged stronger in each successive election". Explain.

3. ಬ್ರಿಕ್ಸ್ ದೇಶಗಳ ನಡುವೆ ನಡೆಯುತ್ತಿರುವ ಮಾತುಕತೆಗಳನ್ನು ಗಮನದಲ್ಲಿರಿಸಿದರೆ ಅವು ಅಮೇರಿಕಾದ ಯಜಮಾನಿಕೆಯನ್ನು ಪ್ರಶ್ನಿಸುವ ಹೊಸ ಶಕ್ತಿ ಬಣವಾಗಿ ಹೊರಹೊಮ್ಮಬಹುದೆಂದು ನಂಬುವಿರಾ?

   Given the Dialogue among the BRICS countries, do you think the latter will emerge as new power block that would challenge the hegemony of the US?

4. "ನವ ಸಾಮಾಜಿಕ ಚಳುವಳಿಗಳು ರಾಜಕಾರಣಕ್ಕೆ ಹೊಸ ಸಂಕಥನಗಳನ್ನು ನೀಡಿರಬಹುದು. ಆದರೆ ಅವು ಜಾಗತೀಕರಣದ ನಡಿಗೆಯನ್ನು ತಡೆಯಲಾರದು". ಭಾರತದಲ್ಲಿ ನಡೆಯುತ್ತಿರುವ ಜಾಗತೀಕರಣ ವಿರೋಧಿ ಚಳುವಳಿಗಳನ್ನು ಗಮನದಲ್ಲಿರಿಸಿ ಚರ್ಚಿಸಿ.

   "New social Movements have introduced new discourses into politics but would not be able to stop the march of globalization". Discuss with specific reference to anti-globalization movements in India.

## ಭಾಗ–ಬ

## Section-B

5. ಕರ್ನಾಟಕ ರಾಜ್ಯದಲ್ಲಿನ ಪ್ರಸಕ್ತ ಕೃಷಿಯ ಸಂಕಟಗಳನ್ನು ಕುರಿತು ಚರ್ಚಿಸಿ. ರಾಜ್ಯದ ರೈತರ ಆತ್ಮಹತ್ಯೆಗೆ ಕಾರಣಗಳನ್ನು ತಿಳಿಸಿ. ಕೃಷಿ ಸಂಕಟ ಹಾಗೂ ವ್ಯಥೆಗಳನ್ನು ಕನಿಷ್ಠಗೊಳಿಸಲು ನಿಮ್ಮ ಸಲಹೆಗಳೇನು?

   Discuss the current Agrarian distress in Karnataka. Account for farmer's suicide in the state. What measures would you suggest for minimising agrarian distress?

6. ಭಾರತದಲ್ಲಿ ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಪಕ್ಷಗಳೊಂದಿಗೆ ಪರ್ಯಾಯ ಶಕ್ತಿಗಳಾಗಿ ಸ್ಪರ್ಧಿಸುತ್ತಿವೆ ವಿಶ್ಲೇಷಿಸಿ.

   "Regional political parties in India are competing with national political parties as alternative powers". Analyse.

7. "ವಿವಿಧ ಭೂಸುಧಾರಣೆಗಳನ್ನು ತರುವುದರ ಮೂಲಕ ಭೂಸಂಬಂಧಗಳಲ್ಲಿ ಅಭೂತಪೂರ್ವ ಬದಲಾವಣೆಗಳನ್ನು ತಂದ ಮೊದಲ ರಾಜ್ಯಗಳಲ್ಲಿ ಕರ್ನಾಟಕವೂ ಒಂದು" ಎಂಬ ಹೇಳಿಕೆಯು ಎಷ್ಟರ ಮಟ್ಟಿಗೆ ಸರಿಯಾಗಿದೆ? ವಿಶ್ಲೇಷಿಸಿ.

   How far this statement "Karnataka is one of the first states to bring in paradigm shift in the realm of land relations by introducing different land reforms" is true? Critically analyse.

8. ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಸಂವಿಧಾನದ ಅನುಚ್ಛೇದ 371(ಜೆ)ಯ ಅಗತ್ಯತೆಯನ್ನು ಸಮರ್ಥಿಸಿ. ಇದು ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುತ್ತದೆಯೇ? ಚರ್ಚಿಸಿ.

   Justify the need for article 371(J) of the constitution for the development of Hyderabad Karnataka. Does this reduce the regional imbalance in Karnataka? Discuss.

---